ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಪ್ರಾರಂಭಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಬಂದಿದೆ.

ಆ) ಬೆಂಗಳೂರು ನಗರ ಜಿಲ್ಲೆಯಲ್ಲಿ ಜನಸಂಖ್ಯೆ ನಾರ್ಮ್ಸ್ ಪ್ರಕಾರ ಅವಶ್ಯಕತೆಗಿಂತ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳಿರುವುದರಿಂದ ಈ ಬಗ್ಗೆ ಕ್ರಮ ಕೈಗೊಂಡಿರುವುದಿಲ್ಲ.

ಶ್ರೀ ವಿ.ಶಿವರಾಜ್:- ಮಾನ್ಯ ಅಧ್ಯಕ್ಷರೇ, ಯಲಹಂಕ ಸ್ಯಾಟಲೈಟ್ ಟೌನ್‌ನಲ್ಲಿ 6 ಸಾವಿರ ಮನೆಗಳನ್ನು ಕಟ್ಟಲಾಗುತ್ತಿದೆ. ಪ್ರೈಮರಿ ಹೆಲ್ತ್ ಸೆಂಟರ್‌ಗೆ ಈಗ ಸ್ಥಳವನ್ನು ಕಾದಿರಿಸಿದರೆ ಮಾತ್ರ ಅನುಕೂಲವಾಗುತ್ತದೆ, ನಿಧಾನ ಮಾಡಿದರೆ ಸ್ಥಳ ಸಿಗುವುದಿಲ್ಲ. ಆದುದರಿಂದ, ಈಗಲೇ ಸ್ಥಳವನ್ನು ಕೊಟ್ಟರೆ ಒಳ್ಳೆಯದೆಂದು ಕೇಳುತ್ತೇನೆ.

ಶ್ರೀ ಹೆಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ಯಲಹಂಕ ಮತ ಕ್ಷೇತ್ರದಲ್ಲಿ 7,50,000 ಸಾವಿರ ಜನಸಂಖ್ಯೆ ಇದೆ. ಕೇಂದ್ರ ಆರೋಗ್ಯ ಮಾರ್ಗಸೂಚಿ ಪ್ರಕಾರ ಬಯಲು ಪ್ರದೇಶಗಳಲ್ಲಿ 30 ಸಾವಿರ ಜನಸಂಖ್ಯೆಗೆ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ 20 ಸಾವಿರ ಜನಸಂಖ್ಯೆಗೆ ಒಂದೊಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಬೇಕೆಂಬ ನಿಯಮವಿದೆ. ಆ ಮಾರ್ಗಸೂಚಿಯ ಪ್ರಕಾರ ಯಲಹಂಕ ಮತ ಕ್ಷೇತ್ರಕ್ಕೆ 25 ಪ್ರಾಥಮಿಕ ಕೇಂದ್ರಗಳು ಬರುತ್ತವೆ. ಆದರೆ ಅಲ್ಲಿ ಈಗಾಗಲೇ 29 ಪ್ರಾಥಮಿಕ ಕೇಂದ್ರಗಳು ಇರುವುದರಿಂದ ಒಂದು ಕಿಲೋಮೀಟರ್ ಒಳಗೇ ಪ್ರಾಥಮಿಕ ಕೇಂದ್ರಗಳ ಸೌಲಭ್ಯ ಸಿಗುವುದರಿಂದ ಮತ್ತೊಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆಗೆಯತಕ್ಕಂಥ ಅಗತ್ಯವಿಲ್ಲವೆಂದು ಉತ್ತರ ಕೊಡಲಿಕ್ಕೆ ನಾನು ಬಯಸುತ್ತೇನೆ.

ವಿಷಯ:- ಬಬಲೇಶ್ವರಕ್ಕೆ ಕುಡಿಯುವ ನೀರಿನ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 127 (1011)

ಶ್ರೀ ಶಿವಾನಂದ ಎನ್.ಪಾಟೀಲ್ (ತಿಕೋಟಾ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989ರಲ್ಲಿ ನೆದರ್‌ಲ್ಯಾಂಡ್ಸ್ ಹಾಗೂ ಭಾರತ ಸರ್ಕಾರದ ನಡುವೆ ಆದ ಒಪ್ಪಂದದಿಂದ ಬಿಜಾಪುರ ತಾಲ್ಲೂಕಿನ ಬಬಲೇಶ್ವರ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆಯ ಬಗ್ಗೆ ಒಪ್ಪಂದ ಆಗಿರುವುದು ನಿಜವೆ?

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸುವ ಗುರಿ

ಹೊಂದಲಾಗಿತ್ತು.

ಇ) ಈ ಯೋಜನೆಯ ಮೂಲ ಅಂದಾಜು ವೆಚ್ಚವೆಷ್ಟು ಮತ್ತು ಈವರೆಗೆ ಖರ್ಚು ಮಾಡಲಾದ ಹಣವೆಷ್ಟು?

ಈ) ಈ ಯೋಜನೆಯ ಈವರೆಗೆ ಪೂರ್ಣಗೊಳ್ಳದೇ ಆ ಭಾಗದ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):-

ಅ) ನೆದರ್‌ಲ್ಯಾಂಡ್ಸ್ ನೆರವಿನಿಂದ ಬಿಜಾಪುರ ಮತ್ತು ಧಾರವಾಡ ಜಿಲ್ಲೆಯ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ ಅನುಷ್ಠಾನದ ಬಗ್ಗೆ 1989ರಲ್ಲಿ ಒಪ್ಪಂದವಾಗಿದ್ದು, ಈ ಬಗ್ಗೆ ಪರಿಷ್ಕೃತ ಒಪ್ಪಂದ ಪತ್ರವನ್ನು ದಿನಾಂಕ:22-9-1993ರಂದು ಸಹಿ ಮಾಡಲಾಗಿದೆ. ಯೋಜನೆಯು ದಿನಾಂಕ:1-6-1993ರಿಂದ ಜಾರಿಗೆ ಬಂದಿದೆ. ಈ ಯೋಜನೆಗೆ ಸೇರಿರುವ 191 ಗ್ರಾಮಗಳಲ್ಲಿ ಬಬಲೇಶ್ವರ ಗ್ರಾಮ ಸಹ ಒಂದಾಗಿರುತ್ತದೆ.

ಆ) ಯೋಜನೆಯ ಅನುಷ್ಠಾನ ಸಂಹಿತೆ (ಪ್ಲಾನ್ ಆಫ್ ಆಪರೇಷನ್)ಯಂತೆ ಈ ಯೋಜನೆಗೆ ಸಂಬಂಧಿಸಿದ ಬಬಲೇಶ್ವರ ಗ್ರಾಮದ ಕಾರ್ಯಕ್ರಮಗಳನ್ನು ಸೆಪ್ಟೆಂಬರ್, 95ಕ್ಕೆ ಮುಕ್ತಾಯಗೊಳಿಸುವ ಗುರಿ ಹೊಂದಲಾಗಿತ್ತು.

ಇ) ಬಬಲೇಶ್ವರ ಗ್ರಾಮದ ನೀರು ಸರಬರಾಜು ಯೋಜನೆಯ ಮೂಲ ಅಂದಾಜು ವೆಚ್ಚು ರೂ. 1, 10, 55, 000.00. ಈವರೆವಿಗೆ ಮಾಡಲಾಗಿರುವ ವೆಚ್ಚ 1.55 ಲಕ್ಷ ರೂಪಾಯಿಗಳು ಮಾತ್ರ.

ಈ) ಬಂದಿದೆ.

ಉ) ಈ ಯೋಜನೆಯ ಕಾಮಗಾರಿಗಳಿಗಾಗಿ ಈಗಾಗಲೇ ಮರು ಟೆಂಡರ್ ಕರೆಯಲಾಗಿದ್ದು ಟೆಂಡರ್ ಸಲ್ಲಿಕೆಗೆ 5-8-1996 ಕೊನೆಯ ದಿನವಾಗಿದ್ದು, ಶೀಘ್ರವಾಗಿ ಗುತ್ತಿಗೆದಾರರನ್ನು ನೇಮಿಸಿ ಅಕ್ಟೋಬರ್ 1996ರಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸುವ ಉದ್ದೇಶವನ್ನು ಹೊಂದಿದೆ. ಕಾಮಗಾರಿಗಳನ್ನು ಪೂರ್ಣಗೊಳಿಸಲು ಅವಶ್ಯವಿರುವ ಕಾಲಾವಧಿ 20 ತಿಂಗಳುಗಳು.

ಶ್ರೀ ಶಿವಾನಂದ ಎನ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, 1989ರಲ್ಲಿ ನೆದರ್‌ಲ್ಯಾಂಡ್ ಗೌರ್ನಮೆಂಟ್‌ಗೂ ಕರ್ನಾಟಕ ಸರ್ಕಾರಕ್ಕೂ ಒಂದು ಅಗ್ರೀಮೆಂಟ್ ಆಗಿ ಕುಡಿಯುವ ನೀರಿನ ಯೋಜನೆ ಮಾಡಲು ಉದ್ದೇಶಿಸಲಾಗಿತ್ತು. ಅಗ್ರೀಮೆಂಟ್ ಪ್ರಕಾರ ಈ ಯೋಜನೆಯು 1995ರ ಅಕ್ಟೋಬರ್‌ನಲ್ಲೇ ಮುಗಿಯಬೇಕಾಗಿತ್ತು. ಆದರೆ, 1996ನೇ

ಇಸವಿಯಾದರೂ ಆ ಕೆಲಸದ ಬಗ್ಗೆ ಟೆಂಡರ್‌ನ್ನು ಕರೆದಿಲ್ಲ. ಈ ಯೋಜನೆಗೆ ನೆದರ್‌ಲ್ಯಾಂಡ್ ಸರ್ಕಾರ ಕೊಡುವ 63 ಕೋಟಿ ರೂಪಾಯಿಗಳ 85 ಪರ್‌ಸೆಂಟ್ ಸಹಾಯ ಧನ ಇದೆ. ಈ ಯೋಜನೆಯು ಆರೇಳು ವರ್ಷಗಳಿಂದ ಕಾರ್ಯಗತವಾಗದೇ ಇರುವುದು ವಿಷಾದಕರವಾದ ಸಂಗತಿಯಾಗಿದೆ. ನನ್ನ ಮತ ಕ್ಷೇತ್ರದಲ್ಲಿ ಈ ಯೋಜನೆಯಿಂದ 17 ಕೋಟಿ ರೂಪಾಯಿಗಳು ಹಾಗೂ ಧಾರವಾಡ ಜಿಲ್ಲೆಯಲ್ಲಿ 34 ಕೋಟಿ ರೂಪಾಯಿಗಳು ಖರ್ಚಾಗಬೇಕಾಗಿದೆ. ಈಗ ಈ ಕೆಲಸವನ್ನು ಇನ್ನು 20 ತಿಂಗಳಲ್ಲಿ ಮುಗಿಸಿಕೊಡಲಾಗುತ್ತದೆಂದು ಉತ್ತರದಲ್ಲಿ ಹೇಳಲಾಗಿದೆ. ನನಗೆ ತಿಳಿದ ಮಟ್ಟಿಗೆ ಈ ಯೋಜನೆಯ ಅಗ್ರಿಮೆಂಟ್ 1998ಕ್ಕೆ ಮುಕ್ತಾಯವಾಗುತ್ತದೆ. ಇದನ್ನು ಎಕ್ಸ್‌ಟೆಂಡ್ ಮಾಡಿಕೊಳ್ಳಲಾಗಿದೆಯೇ ಎಂದು ತಿಳಿಸಬೇಕು ಹಾಗೂ ಇನ್ನು 20 ತಿಂಗಳಲ್ಲಿ ಈ ಕೆಲಸವನ್ನು ಮಾಡಿಸಿಕೊಡಲಾಗುತ್ತದೆಯೇ?

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಈ ಕೆಲಸವು ಮಾನ್ಯ ಸದಸ್ಯರು ಏನು ಆತಂಕ ವ್ಯಕ್ತಪಡಿಸಿದ್ದಾರೋ ಅದೇ ರೀತಿಯಲ್ಲಿ ಆಗಿದೆ. 1989ರಲ್ಲೇ ಇದರ ಒಪ್ಪಂದವಾಗಿದ್ದರೂ ಪರಿಷ್ಕೃತ ಒಪ್ಪಂದ ದಿನಾಂಕ 22-9-1993ರಂದು ಆಗಿದೆ. ಅದರ ಪ್ರಕಾರ ಬಿಜಾಪುರದ 191 ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸಂಬಂಧಪಟ್ಟಂತೆ ಬಬಲೇಶ್ವರ ಗ್ರಾಮ ಒಂದಕ್ಕೆ ಕುಡಿಯುವ ನೀರನ್ನು ಒದಗಿಸಲು ಒಂದು ಕೋಟಿ 10 ಲಕ್ಷದ 55 ಸಾವಿರ ರೂಪಾಯಿಗಳ ಅಂದಾಜು ಮಾಡಿ ಟೆಂಡರ್‌ನ್ನು ಕರೆಯಲಾಗಿತ್ತು. ಆ ಟೆಂಡರ್‌ನಲ್ಲಿ ಇದೇ ಕೆಲಸಕ್ಕೆ 2 ಕೋಟಿ 55 ಲಕ್ಷದ 45 ಸಾವಿರದ 632 ರೂಪಾಯಿಗಳಿಗೆ ಅಂದಾಜು ಬಂದಿತ್ತು. ಅಂದರೆ, ಮೊದಲ ಎಸ್ಟಿಮೇಟ್‌ಗಿಂತ ಇದು ಶೇಕಡಾ 181ರಷ್ಟು ಹೆಚ್ಚಾಗಿದ್ದುದರಿಂದ ಇದು ವಿಪರೀತ ಬೆಲೆ ಆಯಿತೆಂದು ಪುನಃ ಮರು ಟೆಂಡರನ್ನು ಕರೆಯಲಾಗಿದೆ. ಈ ಮರು ಟೆಂಡರ್‌ಗಳನ್ನು ದಿನಾಂಕ 6-8-1996ರಂದು ಓಪನ್ ಮಾಡಿ ದಿನಾಂಕ: 2-10-1996ರಂದು ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಶಿವಾನಂದ ಎನ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ವರ್ಲ್ಡ್ ಬ್ಯಾಂಕ್ ನಾರ್ಮ್ಸ್ ಪ್ರಕಾರ ಟೆಂಡರನ್ನು ಅಪ್ಲೈ ಮಾಡಬೇಕೆಂದು ಒಂದು ಕಡೆ ಹೇಳಲಾಗಿದೆ, ಇನ್ನೊಂದು ಕಡೆ ಡ್ಯಾನಿಡಾ ನಾರ್ಮ್ಸ್ ಪ್ರಕಾರ ಟೆಂಡರ ಕರೆದು ಕೆಲಸ ಕೈಗೆತ್ತಿಕೊಳ್ಳಬಹುದೆಂದು ಹೇಳಲಾಗಿದೆ. ಇದರಲ್ಲಿ ಯಾವುದು ನಿಜ ಎಂದು ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೆ, ವಿಶ್ವ ಬ್ಯಾಂಕ್ ಯೋಜನೆ ಕೆಳಗೆ ಪೂರ್ವಾನ್ವಯವಾಗಿರತಕ್ಕಂಥ ರೀತಿಯಲ್ಲಿ ಪ್ರೀ ಕ್ವಾಲಿಫೈಡ್ ಟೆಂಡರರ್ಸ್ ಇರಬೇಕೆಂಬ ಮಾತು ಇದ್ದರೂ ಕೂಡ ನೆದರ್‌ಲ್ಯಾಂಡ್ ಸಂಯೋಜಕರ ಜೊತೆ ನಾವು ಮಾತನಾಡಿ, ದುಬಾರಿಯಾದ ಟೆಂಡರ್‌ಗಳು ಬಂದಿರುವುದರಿಂದ ನಾವು ಅನಿವಾರ್ಯವಾಗಿ ಮರು ಟೆಂಡರನ್ನು ಕರೆಯುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಂಡಿದ್ದಕ್ಕೆ ಅವರು ಅವಕಾಶ ಕೊಟ್ಟ ಪ್ರಕಾರ ನಾವು ಮರು ಟೆಂಡರ್ ಕರೆದಿದ್ದೇವೆ, ಈಗಾಗಲೇ ಟೆಂಡರ್‌ನ

ಕಾಲಮಿತಿ ಮುಗಿದುಹೋಗಿದೆ, ಆಗಸ್ಟ್ ತಿಂಗಳ 6ನೇ ತಾರೀಖು ಟೆಂಡರ್‌ಗಳನ್ನು ಒಡೆದು ನೋಡುತ್ತೇವೆ, ಅಕ್ಟೋಬರ್ 2ನೇ ತಾರೀಖು ಗಾಂಧಿ ಜಯಂತಿ ದಿವಸ ಶ್ರೀಮಾನ್ ಶಿವಾನಂತ ಪಾಟೀಲರ ಅಮೃತ ಹಸ್ತದಿಂದಲೇ ಆ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಯೋಜನೆಗಳು ಕಾಲಮಿತಿಯೊಳಗೆ ಮುಗಿಯಬೇಕಾಗುತ್ತದೆ. ಟೆಂಡರ ಕರೆದು ಕೆಲಸ ಮಾಡಿಸುವುದರಿಂದ ಕೆಲಸಗಳು ಡಿಲೇ ಆಗುವುದರಿಂದ ಅದರ ಬದಲಾಗಿ ಇಲಾಖೆ ವತಿಯಿಂದಲೇ ಏಕೆ ಕೆಲಸ ಮಾಡಿಸಬಾರದು?

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಕೆಲಸಗಳಲ್ಲಿ ಅನುಭವವಿರುವ ಪ್ರೀಕ್ವಾಲಿಫೈಡ್ ಗುತ್ತಿಗೆದಾರರಿಂದ ಮಾತ್ರ ಈ ಕೆಲಸ ಮಾಡಿಸಬೇಕೆಂದು ವರ್ಲ್ಡ್ ಬ್ಯಾಂಕ್ ಯೋಜನೆಯಲ್ಲಿ ಷರತ್ತುಗಳಿವೆ. ಇಂಥಾ ಕೆಲಸಗಳಿಗೆ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲು ನಿಧಾನವಾಗುತ್ತದೆ ಎನ್ನುವ ಕಾರಣಕ್ಕಾಗಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಎಂಪವರ್ ಕಮಿಟಿ ಮಾಡಲಾಗಿದೆ. ಟೆಂಡರನ್ನು ಯಾವ ರೀತಿ ಕರೆಯಬೇಕೆಂಬ ಬಗ್ಗೆ ಚರ್ಚೆ ಮಾಡುವುದರಲ್ಲೇ ಬಹಳ ವಿಳಂಬವಾಗಿತ್ತು. ನಮ್ಮ ಸರ್ಕಾರ ಬಂದ ನಂತರ ಈ ವಿಚಾರದಲ್ಲಿ ಚಾಲನೆ ಕೊಟ್ಟಿದ್ದೇವೆ. ಇದರ ಬಗ್ಗೆ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

ವಿಷಯ:- ಸಾರ್ವಜನಿಕ ಆಸ್ಪತ್ರೆಯಲ್ಲಿರುವ ಕೂಲಿ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 128 (1111)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಆರೋಗ್ಯ ಮತ್ತು ಕುಟಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರು-9, ವೈದ್ಯೇತರರು-26, ಇವುಗಳ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ?

ಆ) ಮಾಡಲಾಗದಿದ್ದಲ್ಲಿ ಕಾರಣಗಳೇನು?

ಇ) ಆದ್ಯತೆ ಮೇಲೆ ತುಂಬಲು ಕ್ರಮ ಕೈಗೊಳ್ಳಲಾಗುವುದೇ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟಂಬ ಕಲ್ಯಾಣ ಸಚಿವರು):-

ಅ) ಖಾಲಿ ಇರುವ ವೈದ್ಯರ ಹುದ್ದೆಗಳು-9
ಖಾಲಿ ಇರುವ ವೈದ್ಯೇತರರ ಹುದ್ದೆಗಳು-26, ಇನ್ನೂ ಭರ್ತಿ ಮಾಡಲಾಗಿಲ್ಲ.

ಆ) ವೈದ್ಯರುಗಳಿಗೆ ಕಾಲಮಿತಿ ಪದೋನ್ನತಿ ನೀಡುವ ಕಾರ್ಯ ಪ್ರಕ್ರಿಯೆಯಲ್ಲಿದ್ದ